## ಪ್ರಧಾನ ಸಿವ್ಹಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.

## ಸಿ.ಸಿ. ನಂಃ 720/2021

ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ
ಗುರುಮಿಠಕಲ್ ಪೊಲೀಸ್ ಠಾಣೆ

// ವಿರುದ್ಧ //

ಆರೋಪಿತರು ಃ ಮಹಿಬೂಬಿ ಮತ್ತು ಇತರರು.

### ದೋಷಾರೋಪಣೆ

ನಾನು ಅರುಣ ಚೌಗುಲೆ ಬಿ.ಎ.,ಎಲ್.ಎಲ್.ಬಿ.,(Honors) ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು ಯಾದಗಿರಿ, ಈ ಕೆಳಕಂಡ ಆರೋಪಿತರು ಆದ ನಿಮ್ಮ ಮೇಲೆ ಈ ಮೂಲಕ ಕೆಳಕಂಡಂತೆ ಆರೋಪಕ್ಕೆ ಗುರಿಪಡಿಸುತ್ತೇನೆ.

1. ದಿನಾಂಕ 16.09.2021 ರಂದು ಸಂಜೆ 07.30 ಗಂಟೆ ಸುಮಾರಿಗೆ ಗುರುಮಠಕಲ್ ಪೋಲಿಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಚಿಂತಕುಂಟಾ ಗ್ರಾಮದಲ್ಲಿ ಚಾಸಾ-1 ಶ್ರೀಮತಿ ಪಾತೀಮಾ ರವರು ತನ್ನ ಮಗ ಚಾಸಾ-4 ಶ್ರೀ ಖಾಸಿಂಸಾಬ ರವರೊಂದಿಗೆ ತಮ್ಮ ಮನೆಯ ಮುಂದೆ ಇರುವಾಗ ಆರೋಪಿತರಾದ ನೀವು ದೊಂಬಿ ಮಾಡುವ ಏಕೋದ್ದೇಶದಿಂದ ಗುಂಪು ಕಟ್ಟಿಕೊಂಡು ಹೋಗಿ ದೊಂಬಿ ಮಾಡಿದ್ದು, ಈ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ.147 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

2. ಈ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಚಾಸಾ-1 ರವರಿಗೆ ಸೂಳಿ ನೀನು ಹೈದ್ರಾಬಾದಿನಲ್ಲಿಯೇ ಇರುವುದು ಬಿಟ್ಟು ಇಲ್ಲಿಗೇಕೆ ಬರುತ್ತಿದ್ದಿ, ನಿನ್ನ ಗಂಡ ಸತ್ತ ನಂತರ ನಮ್ಮ ಸಂಬಂದ ಮುಗಿಯಿತು ನಿನಗೇಕೆ ನಾವು ನಿನ್ನ ಮನೆಗೆ ಹೋಗುವುದಕ್ಕೆ ದಾರಿ ಬಿಡಬೇಕು ಅಂತಾ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಈ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲ.504 ಸಂಗಡ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

3. ಈ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ 1 ನೇ ಆರೋಪಿತಳಾದ ನೀವು ಅಲ್ಲಿಯೇ ಬಿದ್ದ ಕಟ್ಟಿಗೆಯನ್ನು ತೆಗೆದುಕೊಂಡು ಸದರಿ ಕಟ್ಟಿಗೆಯಿಂದ ಚಾಸಾ-1 ರವರ ಎಡಗಾಲು ಮೊಣಕಾಲಿಗೆ ಹೊಡೆದಿರುತ್ತೀರಿ. 4 ನೇ ಆರೋಪಿತಳಾದ ನೀವು 1 ನೇ ಆರೋಪಿತಳ ಕೈಯಲ್ಲಿದ್ದ ಕಟ್ಟಿಗೆಯನ್ನು ತೆಗೆದುಕೊಂಡು ಚಾಸಾ-1 ರವರ ಎಡಗಾಲು ಮೊಣಕಾಲು ಕೆಳಗಡೆ

ಹೊಡೆದು ಗಾಯಗೊಳಿಸಿರುತ್ತೀರಿ. ಈ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲ.324 ಸಂಗಡ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

4. ಈ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ 2 ನೇ ಆರೋಪಿತನಾದ ನೀವು ಚಾಸಾ-1 ರವರ ಕೈ ಹಿಡಿದು ಎಳೆದಾಡಿ ಗಾಂಭಿರ್ಯತೆಗೆ ದಕ್ಕೆ ಉಂಟು ಮಾಡಿರುತ್ತೀರಿ. ಈ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ.354 ಸಂಗಡ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

5. ಈ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ 3 ಮತ್ತು 4 ನೇ ಆರೋಪಿತರಾದ ನೀವು ಕೈಗಳಿಂದ ಚಾಸಾ-1 ರವರ ಬೆನ್ನಿಗೆ ಮತ್ತು ಕಪಾಳಕ್ಕೆ ಹೊಡದಿರುತ್ತೀರಿ. 5 ಮತ್ತು 6 ನೇ ಆರೋಪಿತರಾದ ನೀವು ಚಾಸಾ-4 ರವರ ತೆಕ್ಕೆಗೆ ಬಿದ್ದು ನೆಲಕ್ಕೆ ಕೆಡವಿ ಕೈಗಳಿಂದ ಹೊಟ್ಟೆಗೆ ಮತ್ತು ಬೆನ್ನಿಗೆ ಹೊಡೆದಿರುತ್ತೀರಿ. ಈ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ.323 ಸಂಗಡ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

6. ಈ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ ಚಾಸಾ-6 ಶ್ರೀ ಚಂದ್ರಪ್ಪ ಮತ್ತು ಚಾಸಾ-7 ಶ್ರೀ ನಾಗಪ್ಪ ರವರು ಜಗಳವನ್ನು ನೋಡಿ ಬಿಡಿಸಿರುತ್ತಾರೆ. ಆರೋಪಿತರಾದ ನೀವು ಜಗಳ ಬಿಟ್ಟು ಹೋಗುವಾಗ ಚಾಸಾ-1 ಮತ್ತು 4 ರವರಿಗೆ ಮಕ್ಕಳೇ ನೀವು ಇವತ್ತು ನಮ್ಮ ಕೈಯಲ್ಲಿ ಜೀವಂತ ಉಳಿದಿದ್ದೀರಿ ಇನ್ನೊಂದು ಸಲ ಸಿಕ್ಕರೆ ನಿಮಗೆ ಜೀವಂತ ಬಿಡುವುದಿಲ್ಲ ಅಂತಾ ಜೀವದ ಬೆದರಿಕೆ ಹಾಕಿರುತ್ತೀರಿ. ಈ ಮೂಲಕ ಆರೋಪಿತರಾದ ನೀವು ಭಾ. ದಂ. ಸಂ. ಕಲಂ.506 ಸಂಗಡ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಲಾಯಿತು.)

ದಿನಾಂಕ: 30.10.2025

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಯಾದಗಿರಿ.